ರಾಜ್ಯದಲ್ಲಿರುವ 'ರೆಕ್ಟಿಫೈಡ್ ಸ್ಪಿರಿಟ್' ಪರವಾನಗಿದಾರರ ಬಗ್ಗೆ

೨೯೪. ಶ್ರೀ ಎನ್.ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ರಾಜ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ 'ರೆಕ್ಟಿಫೈಡ್ ಸ್ಪಿರಿಟ್' ಪರವಾನಗಿದಾರರ ಸಂಖ್ಯೆ ಎಷ್ಟು ;

ಆ) ಈ ಪರವಾನಗಿದಾರರಿಗೆ ಯಾವ ಉದ್ದೇಶಗಳಿಗಾಗಿ 'ರೆಕ್ಟಿಫೈಡ್ ಸ್ಪಿರಿಟ್' ಕೋಟಾ ನೀಡಲಾಗಿದೆ ?

ಇ) ಸದರಿ ಪರವಾನಿಗೆ ಪಡೆದ ಸಂಸ್ಥೆಗಳ ಮಾಲೀಕರ ಹೆಸರುಗಳೇನು ?

ಶ್ರೀ ಡಿ.ಬಿ. ಇನಾಂದಾರ್ (ಅಬಕಾರಿ ಮಂತ್ರಿಗಳು).—

ಅ) ೬೫೬.

ಆ) ಈ ಪರವಾನಿಗೆದಾರರಿಗೆ ರಾಸಾಯನಿಕ ವಸ್ತುಗಳ ತಯಾರಿಕೆಗಾಗಿ, ಔಷಧಿಗಳ ತಯಾರಿಕೆಗಾಗಿ, ಡ್ರಗ್ ಇಂಟರ್‌ಮಿಡಿಯರೀಸ್‌ಗಳಿಗಾಗಿ ಮತ್ತು ಟಾಯ್ಲೆಟ್ ಪ್ರಿಪರೇಷನ್‌ಗಾಗಿ, ಪ್ರಯೋಗ ಶಾಲೆ, ಶೈಕ್ಷಣಿಕ ಸಂಸ್ಥೆ, ಆಸ್ಪತ್ರೆ, ಇತ್ಯಾದಿ ಸಂಸ್ಥೆಗಳ ಉಪಯೋಗಕ್ಕಾಗಿ ರೆಕ್ಟಿಫೈಡ್ ಸ್ಪಿರಿಟ್ ಕೋಟಾ ನೀಡಲಾಗಿದೆ.

ಇ) ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಗುವುದು.

ವಿಧಾನ ಪರಿಷತ್ ರದ್ದು ಮಾಡುವ ಬಗ್ಗೆ.

೫೮೦. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ವಿಧಾನ ಪರಿಷತ್‌ನ್ನು ರದ್ದು ಮಾಡುವ ಸಲಹೆ ಸರ್ಕಾರದವರಲ್ಲಿದೆಯೆ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—

ಅ) ಇಲ್ಲ.

ತರೀಕೆರೆ ತಾಲ್ಲೂಕಿನಲ್ಲಿ ಬಸ್ಸುಗಳು ಓಡಾಡುತ್ತಿರುವ ಬಗ್ಗೆ.

೫೭೫. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತರೀಕೆರೆ ತಾಲ್ಲೂಕ್ ವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಓಡಾಡುತ್ತಿರುವ ಸ್ಥಳೀಯ ಬಸ್ಸುಗಳ ಸಂಖ್ಯೆ ಎಷ್ಟು ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ತರೀಕೆರೆಯು ರಾಷ್ಟ್ರೀಕರಣವಾಗಿಲ್ಲದ ವಲಯದಲ್ಲಿರುತ್ತದೆ. ಒಳವರ್ಗಗಳಲ್ಲಿ ಖಾಸಗೀ ವಾಹನಗಳ ಮಾಲೀಕರು ಓಡಿಸುತ್ತಿರುತ್ತಾರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕಾರ್ಯಾಚರಣೆಯು ನಿಯಮಿತವಾಗಿದ್ದು ಈ ಕೆಳಕಂಡಂತೆ ಇದೆ.

೧) ತರೀಕೆರೆ–ಶಿವಣಿ

೨) ತರೀಕೆರೆ-ರೋಪವೇ ಕಾಲೋನಿ

೩) ಕಡೂರು–ಬೀರೂರು–ಕೂಡ್ಲೂರು–ಮುಂದ್ರೆ

೪) ತರೀಕೆರೆ–ಕೆಮ್ಮಣಗುಂಡಿ.